ಸಿಸಿ ನಂಃ 1668/2021
ಸಿ.ಡ್ಲ್ಯೂ 9/ಪಿ.ಡಬ್ಲ್ಯೂ 5

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 1668/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಕ್ಬರಅಲಿ ಖಾಜಿ |
| ತಂದೆಯ ಹೆಸರು | ಃ | ಅಬ್ದುಲಗಣಿ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಉಪನ್ಯಾಸಕರು |
| ವಾಸ ಸ್ಥಳ | ಃ | ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 13-09-2023**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು 2021 ರಿಂದ ಮಾರ್ಚ 2023 ವರೆಗೆ ಧಾರವಾಡ ಜಿಲ್ಲೆಯಲ್ಲಿ ವಯಸ್ಕ ಶಿಕ್ಷಣ ಇಲಾಖಾ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ 31-03-2021 ರಂದು ಸಾಯಂಕಾಲ ಅಂದಾಜು 4.30 ಗಂಟೆ ಸಮಯಕ್ಕೆ ವಿದ್ಯಾಗಿರಿ ಪೋಲಿಸರು ನನಗೆ ಪೋಲಿಸ್ ಠಾಣೆಗೆ ಕರೆಯಿಸಿ ಒಬ್ಬ ವ್ಯಕ್ತಿ ಗಾಂಜಾ ಸಾಗಾಟ ಮಾಡುತ್ತಿದ್ದಾನೆ ನೀವು ಪತ್ರಾಂಕಿತ ಅಧಿಕಾರಿ ಎಂದು ಬರಬೇಕು ಎಂದು ಹೇಳಿ ನನಗೆ ಒಂದು ನೋಟಿಸ್ ನೀಡಿದ್ದರು . ಅದರಂತೆ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ . ನಂತರ ನಾನು , ಪೋಲಿಸರು ಇಬ್ಬರು ಪಂಚರು ಸೇರಿ ತೇಜಸ್ವಿನಿ ನಗರದಲ್ಲಿರುವ ಉರ್ದು ಶಾಲೆಯ ಹತ್ತಿರ ಹೋಗಿ ಅಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಹತ್ತಿರ ಹೋಗಿದ್ದೆವು . ಆತ ಒಂದು ಕಪ್ಪು ಬಣ್ಣದ ಬ್ಯಾಗ ತನ್ನ ಹೆಗಲಿಗೆ ಹಾಕಿಕೊಂಡು ನಿಂತಿದ್ದ . ನಾವು ಸದರಿ ಸ್ಥಳಕ್ಕೆ ಹೋಗುವ ಮುಂಚೆ ನಮ್ಮ ಅಂಗ ಜಪ್ತು ಮಾಡಿಕೊಂಡು ಹೋಗಿದ್ದೆವು . ಪೋಲಿಸರು ಸದರಿ ವ್ಯಕ್ತಿಯ ಬ್ಯಾಗ ಮತ್ತು ಆತನ ಅಂಗ ಜಪ್ತಿ ಮಾಡಿದಾಗ ಆತನ ಬ್ಯಾಗನಲ್ಲಿ ಮತ್ತು ಪ್ಯಾಂಟ ಜೇಬಿನಲ್ಲಿ ಒಟ್ಟು 103 ಗಾಂಜಾ ಚೀಟಿಗಳು ಇರುವುದು ಕಂಡು ಬಂದಿತ್ತು . ಆತ ಅಂದಾಜು 40 ವರ್ಷ ವಯಸ್ಸಿನ ವ್ಯಕ್ತಿಯಾಗಿದ್ದ . ಆತನ ಹೆಸರು ತೋಡ್ಕರ ಎಂದು ತಿಳಿದು ಬಂದಿತ್ತು . ಸದರಿ ಸ್ಥಳದಲ್ಲಿ ಪೋಲಿಸರು ಸದರಿ 103 ಪ್ಯಾಕೇಟಗಳ ಪೈಕಿ 13 ಪ್ಯಾಕೇಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿದ್ದರು . ಆತನ ಹತ್ತಿರ ಸದರಿ ಕಪ್ಪು ಬಣ್ಣದ ಬ್ಯಾಗ ಜೊತೆ ಒಂದು ಪ್ಲಾಸ್ಟೀಕ ಕೈಚೀಲ

ಹಾಗೂ ರೂ.560/- ನಗದು ಹಣ ಸಹ ಸಿಕ್ಕಿದ್ದವು . ಕಪ್ಪು ಬಣ್ಣದ ಬ್ಯಾಗ ಮೇಲೆ ಬಾಹುಬಲಿ ಎಂದು ಬರೆದಿತ್ತು . ಸದರಿ ಗಾಂಜಾ ಪ್ಯಾಕೇಟಗಳನ್ನು ತೂಕ ಮಾಡಿದ್ದರು . ಅವುಗಳ ತೂಕ 890 ಗ್ರಾಂ ಇತ್ತು . ರಾಸಾಯನಿಕ ಪರೀಕ್ಷೆಗಾಗಿ ತೆಗೆದ 15 ಪ್ಯಾಕೇಟಗಳನ್ನು ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ ಮಾಡಿ ಸೀಲ್ ಮಾಡಿದ್ದರು . ಉಳಿದ 88 ಪ್ಯಾಕೇಟಗಳನ್ನು ಮತ್ತೊಂದು ಬಟ್ಟೆಯಲ್ಲಿ ಸುತ್ತಿ ಪ್ಯಾಕ ಮಾಡಿ ಸೀಲ್ ಮಾಡಿದ್ದರು . ಅವುಗಳಿಗೆ ನಾನು, ಪಂಚರು ಮತ್ತು ಪೋಲಿಸರು ಸಹಿ ಮಾಡಿದ್ದೆವು . ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಗಾಂಜಾ ಪ್ಯಾಕೇಟಗಳ ತೂಕ 150 ಗ್ರಾಂ ಇತ್ತು . ಉಳಿದ ಗಾಂಜಾ ಪ್ಯಾಕೇಟಗಳ ತೂಕ 800 ಗ್ರಾಂ ಇತ್ತು . ಅದಾದ ನಂತರ ಪಂಚರು ವರದಿ ತಯಾರಿಸಿದ್ದರು . ಅದನ್ನು ಪಂಚರೇ ಬರೆದಿದ್ದರು . ಸದರಿ ಪಂಚನಾಮೆಗೆ ಇಬ್ಬರು ಪಂಚರು , ಪೋಲಿಸರು ಮತ್ತು ನಾನು ಸಹಿ ಮಾಡಿದ್ದೆವು . ನನ್ನ ಸದರಿ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನಿಶಾನೆ-ಪಿ-1 ರ ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ನಿಶಾನೆ-ಪಿ-1 (ಸಿ) ರಿಂದ (ಇ) ಎಂದು ಗುರುತಿಸಲಾಯಿತು . ಆ ಬಗ್ಗೆ ತನಿಖಾಧಿಕಾರಿ ಮುಂದೆ ನನ್ನ ಹೇಳಿಕೆ ನೀಡಿದ್ದೆನೆ . ಸದರಿ ಸದಳದಲ್ಲಿ ಪೋಲಿಸರು ಪೋಟೋ ತೆಗೆದಿದ್ದರು .ಅವುಗಳು ನಾನು ಈಗ ನೋಡುತ್ತಿರುವ ನಿಶಾನೆ-ಪಿ-2 ಮತ್ತು 3 ರ ಪೋಟೋಗಳಾಗಿವೆ . ನಿಶಾನೆ-ಪಿ-2 ರ ಪೋಟೋದಲ್ಲಿ ನಾನು , ಆರೋಪಿ , ಪೋಲೀಸರು ಮತ್ತು ಪಂಚರು ಇದ್ದೆವೆ . ನಿಶಾನೆ-ಪಿ-3 ರ ಪೋಟೋ ಸದರಿ ಸ್ಥಳದಲ್ಲಿದ್ದ ಗಾಂಜಾ ಪ್ಯಾಕೇಟಗಳ , ಕಪ್ಪು ಬಣ್ಣದ ಬ್ಯಾಗ ಮತ್ತು ಪ್ಲಾಸ್ಟಿಕ ಕೈಚೀಲದ ಪೋಟೊಗಳಾಗಿವೆ . ಆ ದಿನ ಜಪ್ತುಪಡಿಸಿಕೊಂಡ ಸದರಿ ವಸ್ತುಗಳನ್ನು ಮತ್ತು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತತನ್ನು ನೋಡಿ ಗುರುತಿಸಿ ಆ ದಿನ ಸ್ಥಳದಲ್ಲಿದ್ದ ಆರೋಪಿತನೇ ಆಗಿದ್ದಾನೆ ಎಂದು ಗುರುತಿಸಿರುತ್ತಾರೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎಂ ಓ-1 ರಿಂದ 4 ನ್ನು ನೋಡಿದರೆ ಗುರುತಿಸಿರುತ್ತಾರೆ. ಸಾಕ್ಷಿ ಎಂ ಓ-1 , 3 ಮತ್ತು 4 ರ ಮೇಲೆ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ಎಂ ಓ-1 (ಬಿ) , ಎಂ ಓ-3 (ಸಿ) , ಎಂ ಓ-4 (ಸಿ) ಎಂದು ಗುರುತಿಸಲಾಯಿತು . ಆ ದಿನ ನಾನು ನೋಡಿರುವ ಹಳದಿ ಬಣ್ಣದ ಪ್ಲಾಸ್ಟಿಕ ಕೈಚೀಲ ಈಗ ನ್ಯಾಯಾಲಯದ ಮುಂದೆ ಇರುವ ಕೈಚೀಲ ಆಗಿದೆ . ಅದನ್ನು ಎಂ ಓ-4 (ಡಿ) ಎಂದು ಗುರುತಿಸಲಾಯಿತು . ಎಂ ಓ-2 ರಲ್ಲಿರುವ ಸ್ಯಾಚೇಟ್ಸಗಳು ಆ ದಿನ ಆರೋಪಿತನ ಹತ್ತಿರ ಇದ್ದ ಬ್ಯಾಗನಲ್ಲಿದ್ದವು . ಪೋಲಿಸರು ಸದರಿ ಪ್ರಕ್ರಿಯೇ ದೃಡಿಕರಣಪಡಿಸಲು ಪತ್ರಾಂಕಿತ ಅಧಿಕಾರಿಗಳು

ಬೇಕು ಎಂದು ನನ್ನನ್ನು ಕರೆಸಿದ್ದರು . ಪಂಚರು ಅಂಬೇಡ್ಕರ ನಗರದವರಾಗಿದ್ದರು. ಸದರಿ ಪಂಚನಾಮೆ ಆ ದಿನ ಅಂದಾಜು 5.30 ಗಂಟೆಗೆ ಪ್ರಾರಂಭವಾಗಿ 7.00 ಗಂಟೆಗೆ ಮುಗಿದಿತ್ತು . ಪೋಲಿಸರು ನನಗೆ ನೀಡಿದ ಕೋರಿಕೆ ಪತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-5 ಎಂದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-5 (ಎ) ಎಂದು ಗುರುತಿಸಲಾಯಿತು.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ನಿಶಾನೆ-ಪಿ-1 ರ ಪಂಚನಾಮೆಯನ್ನು ಪಂಚರು ಹೇಳಿದ ಹಾಗೆ ಪೋಲಿಸರು ಬರೆದಿದ್ದರು ಎಂದರೆ ಸರಿ . ಪೋಲಿಸರು ಆ ದಿನ ಆರೋಪಿತನ ಅಂಗ ಶೋಧನೆ ಮಾಡಲು ನನ್ನ ಸಮಕ್ಷಮ ಶೋಧನೆ ಮಾಡಬೇಕಾ ಎಂದು ಕೇಳುವ ಸಲುವಾಗಿ ನನಗೆ ಕರೆಸಿದ್ದರು ಎಂದರೆ ಸರಿ . ಆ ದಿನ ಜಪ್ತುಪಡಿಸಿಕೊಂಡ ಕಪ್ಪು ಬಣ್ಣದ ಬ್ಯಾಗ ಮೇಲೆ ಲೇಗಾನ ಎಂದು ಹಾಗೂ ಹಳದಿ ಬಣ್ಣದ ಬ್ಯಾಗ ಮೇಲೆ ಬಾಹುಬಲಿ ಎಂದು ಬರೆದಿತ್ತು ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎ ಎಂ ವಕೀಲರಿಂದ**

ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ಪೋಲಿಸರು ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನೀಡಿರಲಿಲ್ಲ ಎಂದರೆ ಸಾಕ್ಷಿ ದಾಳಿ ಮಾಡುವುದು ಇದೆ ಎಂದು ಹೇಳಿ ನೋಟಿಸ ಕೊಟ್ಟಿದ್ದರು ಎಂದು ಉತ್ತರಿಸಿರುತ್ತಾರೆ . ನಿಶಾನೆ-ಪಿ-5 ರ ನೋಟಿಸ ನನಗೆ ಯಾವ ಸಮಯಕ್ಕೆ ಮತ್ತು ಯಾವ ಸ್ಥಳದಲ್ಲಿ ನೀಡಿದ್ದರು ಎನ್ನುವ ಬಗ್ಗೆ ಅದರಲ್ಲಿ ಬರೆದಿಲ್ಲ ಎಂದರೆ ಸರಿ . ಸದರಿ ಕೋರಿಕೆ ಪತ್ರಕ್ಕೆ ನಾನು ಲಿಖಿತವಾಗಿ ಯಾವುದೇ ಉತ್ತರ ನೀಡಿಲ್ಲ ಎಂದರೆ ಸರಿ . ಸದರಿ ನಿಶಾನೆ-ಪಿ-5 ರ ಕೋರಿಕೆ ಪತ್ರ ನನ್ನ ಹೆಸರಿಗೆ ಬರೆದಿಲ್ಲ ಎಂದರೆ ಸರಿ . ಸಾಕ್ಷಿ ಆದರೆ ನನ್ನ ಹುದ್ದೆಗೆ ಬರೆದಿದ್ದರು ಎಂದು ಉತ್ತರಿಸಿರುತ್ತಾರೆ . ದಿಃ 31-03-2021

ಸಿಸಿ ನಂಃ 1668/2021
ಸಿ.ಡ್ಬ್ಲ್ಯೂ 9/ಪಿ.ಡಬ್ಲ್ಯೂ 5

ರಂದು ಒಬ್ಬ ಆರೋಪಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂದು ನನಗೆ ಪೋಲಿಸರು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪೋಲಿಸ್ ಠಾಣೆಗೆ ಹೋದಾಗ ಸಾಯಂಕಾಲ 4.30 ರಿಂದ 5.00 ಗಂಟೆ ಆಗಿತ್ತು . ಪಂಚರು ನಾನು ಪೋಲಿಸ್ ಠಾಣೆಗೆ ಹೋದಾಗ ಠಾಣೆಯಲ್ಲಿಯೇ ಇದ್ದರು . ಅವರು ಠಾಣೆಯಲ್ಲಿ ಹಾಜರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಎಂ ಓ-1 ರ ತರಹದ ಕಪ್ಪು ಬಣ್ಣದ ಬ್ಯಾಗಗಳು ಸಾಮಾನ್ಯವಾಗಿ ಮಾರುಕಟ್ಟೆಗಳಲ್ಲಿ ಸಿಗುತ್ತವೆ ಎಂದರೆ ಸರಿ . ಆರೋಪಿತನ ಹತ್ತಿರ ಸಿಕ್ಕ ಹಣ ನೋಟಿನ ಮುಖ ಬೆಲೆಗಳು ನನಗೆ ಈಗ ನೆನಪಿಲ್ಲ . ನಿಶಾನೆ-ಪಿ-1 ರ ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿಲ್ಲ ಎಂದರೆ ಸರಿ . ಸದರಿ ಪಂಚನಾಮೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಆ ದಿನ ನಾನು 5-6 ಸಹಿಗಳನ್ನು ಮಾಡಿದ್ದೆ . ನಾನು ಯಾವುದೇ ಖಾಲಿ ಬಿಳಿ ಹಾಳೆಗಳ ಮೇಲೆ ಸಹಿ ಮಾಡಿಲ್ಲ . ಪೋಲಿಸರು ಪಂಚನಾಮೆ ಬರೆದ ನಂತರ ನಾನು ಸಹಿ ಮಾಡಿದ್ದೆ ಎಂದರೆ ಸಾಕ್ಷಿ ಓದಿ ಸಹಿ ಮಾಡಿದ್ದೆನೆ ಎಂದು ಉತ್ತರಿಸಿರುತ್ತಾರೆ . ನನ್ನ ಸಮಕ್ಷಮ ಸದರಿ ಪಂಚನಾಮೆಯ ಪ್ರತಿಯನ್ನು ಆರೋಪಿತನಿಗೆ ನೀಡಿಲ್ಲ . ನಿಶಾನೆ-ಪಿ-2 ಮತ್ತು 3 ರ ಪೋಟೋ ಸದರಿ ಸ್ಥಳದಲ್ಲಿ ತೆಗೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ 15 ಸ್ಯಾಚೇಟಗಳನ್ನು ಪ್ರತ್ಯೇಕವಾಗಿ ತೆಗೆದಿರಿಸಿ ಪ್ಯಾಕ ಮಾಡಿದ್ದರು ಎಂದು ಹಾಗೂ ಉಳಿದ ಸ್ಯಾಚೇಟಗಳು ಸಹ ಪ್ರತ್ಯೇಕವಾಗಿ ಪ್ಯಾಕ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಗಾಂಜಾ ಆರೋಪಿತನಿಂದ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ಪಂಚನಾಮೆ ಸಹ ಮಾಡಿಲ್ಲ ಎಂದರೆ ಸರಿಯಲ್ಲ . ನಾವು ಘಟನಾ ಸ್ಥಳಕ್ಕೆ ತಲುಪಿದಾಗ 5.30 ಗಂಟೆಯಾಗಿತ್ತು . ನಾವು ಆ ಸಮಯಕ್ಕೆ ಘಟನಾ ಸ್ಥಳಕ್ಕೆ ಹೋಗದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕಪ್ಪು ಬಣ್ಣದ ಬ್ಯಾಗ ಮೇಲೆ ಲೇಗಾನ ಎಂದು ಬರೆದಿರುವ ವಿಷಯ ನನಗೆ ಈಗ ಓದಿ ಹೇಳಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ . ಆ ದಿನ ಆರೋಪಿ ಸದರಿ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ . ನಾನು ಅ ದಿನ ಪಂಚನಾಮೆಗಾಗಲೀ ಅಥವಾ ಅಂಗ ಜಪ್ತಿಗಾಗಲೀ ಸದರಿ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.